ನಡೆಯುತ್ತಿರುವ ಸ್ವಯಂಚಾಲಿತ ಹಗಲುಗನಸು' ಅಂತ ಲೀ ಲ್ಯಾವಿಂಗರ್ ಸುಮ್ಮನೆ ಹೇಳಿದ್ದಾರೆಯೇ?

ಟೀವಿಯ ಈ ಕಾರ್ಯಕ್ರಮಗಳನ್ನು ಕುಟುಂಬದ ಸದಸ್ಯರು ಅವರವರ ವಿರಾಮಕಾಲದ ಲಭ್ಯತೆ, ಆಸಕ್ತಿ, ಅಭಿರುಚಿ, ಆದ್ಯತೆ ಮತ್ತು ಅನಿವಾರ್ಯತೆಗಳನ್ನು ಅನುಲಕ್ಷಿಸಿ ಹೊಂದಿಸಿಕೊಂಡಿರುತ್ತಾರೆ. ಕೆಲವೊಮ್ಮೆ ಗೃಹಿಣಿಯರಿಗೂ, ಮಕ್ಕಳಿಗೂ, ಹಿರಿಯರಿಗೂ, ಕುಟುಂಬದ ಯಜಮಾನ ತಾನೆಂಬ ಭ್ರಮೆಯ ಗಂಡಸಿಗೂ ಅವರವರ ಆಸಕ್ತಿಯ ಅಡುಗೆ, ಕಾರ್ಟೂನು, ಧಾರಾವಾಹಿ ಮತ್ತು ವಾರ್ತೆಗಳು ಏಕಕಾಲಕ್ಕೆ ವಕ್ಕರಿಸುವಂಥ ಸಂದರ್ಭಗಳು ಎದುರಾದಾಗ ರಿಮೋಟಿಗಾಗಿ ಅಂದರೆ ಟೀವಿಯ ಮೇಲಿನ ಅಧಿಪತ್ಯ ಸ್ಥಾಪನೆಗಾಗಿ ವಯಸ್ಸು–ಲಿಂಗ–ಸ್ಥಾನಮಾನಗಳನ್ನು ಗಾಳಿಗೆ ತೂರಿ ಘನಘೋರ ಕದನಗಳಾಗುವುದುಂಟು. ಇಂಥ ಸಂದರ್ಭಗಳಲ್ಲೆಲ್ಲ ಶಾಂತಿ ಧ್ವಜ ಹಾರಿಸಿ ಅನಿವಾರ್ಯವಾಗಿ ಒಂದು ಹೆಜ್ಜೆ ಹಿಂದೆ ಸರಿಯಬೇಕಾಗಿ ಬರುವುದು ಮಾತ್ರ ಬಹುಪಾಲು ಸಂದರ್ಭಗಳಲ್ಲಿ ಹಿರಿಯರಿಗೆ ಮತ್ತು ಗಂಡಸರಿಗೆ. ಕುಟುಂಬದ ಹಿತ ದೃಷ್ಟಿಯಿಂದ ಇಂಥ ಹಲವಾರು ತ್ಯಾಗಗಳನ್ನು ಮಾಡಿ ಅದು ಅಭ್ಯಾಸವೇ ಆಗಿರುವ ಅವರು ಹೋಮ್ ಪಿಚ್ಚಿನಲ್ಲೇ ತಮಗಾದ ಸೋಲಿನ ನೋವನ್ನು ಮರೆಯಲು ಸಂಜೆಯ ತಂಪುದಾಣಗಳನ್ನು ಹುಡುಕಿಕೊಂಡು ಹೊರಡುತ್ತಾರೆ, ಹಿರಿಯರು ವಾಕಿಂಗಿನ ನೆಪ ಮಾಡಿಕೊಂಡು ಮನೆಯಿಂದ ಹೊರಗೆ ಬರುತ್ತಾರೆ. ಅದೇನೇ ಇದ್ದರೂ ಜನರಿಗೆ ಪರಸ್ಪರರ ಮುಖಗಳನ್ನು ನೋಡಿಕೊಳ್ಳುವುದಕ್ಕಿಂತ ಟೀವಿ ಪರದೆಯು ತೋರಿಸುವ ಬೇರೆ ಏನನ್ನಾದರೂ ನೋಡುವುದರಲ್ಲೇ ಹೆಚ್ಚು ಆಸಕ್ತಿ ಇದೆ ಎಂದು ಟೀವಿ ಸಾಧಿಸಿ ತೋರಿಸಿಯಾಗಿದೆ. ಇಂಥ ಅರ್ಜಿತ ಆಸಕ್ತಿಯ ಫಲವಾಗಿಯೇ ನಾವಿಂದು ಟೀವಿಯಲ್ಲಿ ತೋರಿಸದ ಹೊರತು ಯಾವ ನಿಜವೂ ನಿಜವೆಂದು ಅನ್ನಿಸದಂಥ ಸ್ಥಿತಿಗೆ ತಲುಪಿಬಿಟ್ಟಿದ್ದೇವೆ.

ಮಕ್ಕಳ ಮೇಲೆ ಟೀವಿ ಮಾಡಿರುವ ಮೋಡಿಯಂತೂ ಅಷ್ಟಿಷ್ಟಲ್ಲ. ನಾವು ಚಿಕ್ಕವರಿದ್ದಾಗ ಆಟದ ಬಯಲಿನಿಂದ ನಮ್ಮನ್ನು ಮನೆಗೆ ಅಕ್ಷರಶಃ ಈಚಲು ಜಬರಿಯಿಂದ ನಾಲ್ಕು ಬಾರಿಸಿಯೇ ದರದರ ಎಳೆದು ತರುತ್ತಿದ್ದುದು ರೂಢಿಗತ ಅಭ್ಯಾಸವಾಗಿತ್ತು. ಮಣ್ಣು, ಕೆಸರು, ನೀರು, ದೂಳುಗಳಲ್ಲಿ ಮಿಂದೆದ್ದು ಅನ್ಯಗ್ರಹ ಜೀವಿಗಳಂತೆ ಅವತಾರವೆತ್ತಿರುತ್ತಿದ್ದ ನಮ್ಮನ್ನು ಮನೆಯಲ್ಲಿ ಎಲ್ಲರೂ ಉಗಿದು ಉಪ್ಪಿನಕಾಯಿ ಹಾಕುವವರೇ. ಸಂಜೆಯ ಸಹಸ್ರನಾಮಾರ್ಚನೆಗೆ ಅಭ್ಯಾಸವಾಗಿ ಹೋಗಿದ್ದ ನಾವು ಅವನ್ನೆಲ್ಲ ಸ್ಥಿತಪ್ರಜ್ಞ ಭಾವದಲ್ಲಿ ಸ್ವೀಕರಿಸಿ ಅನಿವಾರ್ಯವಾಗಿ ಪುಸ್ತಕದ ಪುಟದೊಳಗಿಳಿದು ಓದುತ್ತ ಒದ್ದಾಡುತ್ತಿದ್ದೆವು. ಈಗಿನ ಮಕ್ಕಳು ಹಾಗಲ್ಲ. ಕೈಯಲ್ಲಿ ರಿಮೋಟು ಕೊಟ್ಟರೆ ಸಾಕು ಹಾಲುಗಲ್ಲದ ಮಕ್ಕಳೂ ಮುಚ್ಚಿಕೊಂಡು ಮಮ್ಮು ಉಣ್ಣುತ್ತವೆ. ಯಾವ ಚಂದಮಾಮನ ಹಂಗೂ ಇಲ್ಲ, ದಿನಕ್ಕೊಂದು ಹೊಸ ಕಥೆ ಹುಡುಕುವ ರಗಳೆಯೂ ಇಲ್ಲ. ಇನ್ನು ಶಾಲೆಗೆ ಹೋಗುವ ಹುಡುಗರಿಗೆ 'ಹೊರಗೆ ಆಡವಾಡಲಿಕ್ಕೆ ಹೋಗ್ರೋ' ಎಂದು ಕುತ್ತಿಗೆ ಹಿಡಿದು ನೂಕಿದರೂ ಹೋಗುವವರಿಲ್ಲ. ಏಕೆಂದರೆ ಅವರಿಗೆ ತಮ್ಮ ಓಣಿಯಲ್ಲಿ ಇರುವ ಓರಗೆಯವರ ಪರಿಚಯವೇ ಇಲ್ಲ. ಅವರ ಗೆಳೆಯರೆಲ್ಲ ಟೀವಿಯೊಳಗೇ ಮನೆ ಮಾಡಿಕೊಂಡಿದ್ದಾರೆ. ಚುಟ್ಕಿ, ಕಾಲಿಯಾ, ಛೋಟಾ ಭೀಮ್, ಡೋರೆಮಾನ್, ಶಿವಾ... ಶಿವಶಿವಾ! ಈ ಟೀವಿ ನಮ್ಮ ಮಕ್ಕಳ ಸ್ಥಿತಿಯನ್ನು ಎಲ್ಲಿಗೆ ತಂದಿಟ್ಟಿತು ಎಂದು ಯೋಚಿಸಿದರೆ ಭಯವಾಗುತ್ತದೆ. ಪೌಲ್ಟ್ರಿಯಲ್ಲಿ ಸದಾ ಕುಸಿದುಕೊಂಡೇ ಕೂತಿರುವ ಬ್ರಾಯ್ಲರ್ ಕೋಳಿಗಳಂತೆ ನಮ್ಮ ಹುಡುಗರು ಟೀವಿ ಮುಂದೆ ಕುಳಿತುಕೊಂಡೇ ಇರುತ್ತಾರೆ. ಇವರು ಓಡಾಡಿದರಲ್ಲವೇ ಕೈಕಾಲು ಗಟ್ಟಿಯಾಗೋದು, ಮಳೆ ಚಳಿ ಗೊತ್ತಾಗೋದು, ರೋಗನಿರೋಧಕ ಶಕ್ತಿ ಬೆಳೆಯೋದು...

ಮಕ್ಕಳು, ಯುವಕರು ಮತ್ತು ಮುದುಕರಿಗೆ ಟೀವಿಯು ಸಾಂಗತ್ಯದ ಭ್ರಮೆಯನ್ನು ನೀಡುತ್ತದೆ. ಸುಳ್ಳು ಸಾಂತ್ವನವನ್ನು ನೀಡುತ್ತದೆ. ಲಕ್ಷಾಂತರ ಜನರನ್ನು ಏಕಕಾಲಕ್ಕೆ ಒಂದೇ ಜೋಕಿಗೆ ನಗಿಸುವಂತೆ ಕಂಡರೂ, ಆಳದಲ್ಲಿ ಅವರ ನಡುವೆ ಯಾವುದೇ ಕೊಂಡಿಯನ್ನು ಸ್ಥಾಪಿಸಲು ಸಾಧ್ಯವಾಗದೆ